ಕೆರೆ ನೀರಲ್ಲಿ ಹೆಣ ಬಿದ್ದವೆ ಅನ್ನದು ಗೊತ್ತಾದ್ರೆ ಜನ ಸುಮ್ನಿರಲ್ಲ. ಅವರು ಸುಮ್ಮನಿದ್ರೂ ತಲೆ ಕೆಡಿಸೋರಿಗೇನು ಕಡಿಮೆಯೇ? ಈ ಚೇರ್ಮನ್‌ಗಿರಿ ಒಂದ್ ಇಲ್ಲದಿದ್ರೆ ಮನೇಲಿ ಕುಂತ್ಗಂಡು ತಮಾಷೆ ನೋಡಬೌದಿತ್ತು. ಊರಿಗೆ ನೀರು ಕೊಡೋದು ಪಂಚಾಯ್ತಿ ಚೇರ್ಮನ್ನರ ಕೆಲ್ಸ. ನಿಮ್ಮ ಕೈಲಿ ಆಗದಿದ್ರೆ ಕುರ್ಚಿಬಿಟ್ಟು ಇಳೀರಿ ಅನ್ನೋ ತರಾನೇ ಹುಂಬ ಜನ ಮಾತಾಡ್ತಾರೆ... ಈಗೇನ್ ಮಾಡೋದು? ಯೋಚಿಸಿದರು.

ಊರ ಜನಕ್ಕೆ ಗೊತ್ತೇ ಆಗದಂತೆ ಹೆಣಗಳನ್ನು ಕೆರೆಯಿಂದ ಹೊರಕ್ಕೆ ಎಳೆಸಿ ಹಾಕಬೇಕು. ಪೊಲೀಸರಿಗೂ ಗೊತ್ತಾಗಬಾರದು. ಯಂಕಟಿ, ತಿಮ್ಮರಾಯಿ ಇಬ್ರನ್ನೂ ವಾರದ ಮಟ್ಟಿಗೆ ಎಲ್ಲಿಗಾದ್ರೂ ಕಳಿಸಬೇಕು. ಕೆರೆಯ ನೀರನ್ನು ಶುದ್ಧಿ ಮಾಡಿಸಬೇಕು. ಅಷ್ಟು ನೀರನ್ನು ಶುದ್ಧಿ ಮಾಡದು ಹೆಂಗೆ? ಹೀಗೆ ಏನೇನೊ ಯೋಚನೆಗಳು. ಕೂತಲ್ಲೇ ಚಡಪಡಿಸಿದರು.

ಅಷ್ಟರಲ್ಲಿ ಪಿಡಿಓ ಅಮರನಾರಾಯಣ ಬಂದ. ತಿಮ್ಮರಾಯಿ ಅವನ ಮನೆಗೆ ಹೋದಾಗ ಇನ್ನೂ ಮಲಗಿದ್ದನೇನೊ. ಕಣ್ಣುಗಳು ಊದಿಕೊಂಡಿವೆ. ಅವನ ಮುಖ ನೋಡುತ್ತಲೇ, 'ಬರ್‍ರಿ, ಬರ್‍ರಿ... ನಮ್ಮ ಪಂಚಾಯ್ತಿಗೆ, ಊರಿಗೆ ದೊಡ್ಡ ತಲೆನೋವು ಶುರುವಾಗಿದೆ. ರಾಜಣ್ಣಂಗೂ ಹೇಳಿ ಕಳ್ಸೀದೀನಿ... ಅವನು ಬಂದ ಮೇಲೆ ವಿಷಯ ಏನು ಅಂಬೋದನ್ನ ಹೇಳ್ತೀನಿ... ಮೊದಲು ಕಾಪಿ ಕುಡೀರಿ' ಎನ್ನುತ್ತ ಉಪಚಾರದ ಮಾತಾಡಿದರು.

ವಿಶಾಲ ಜಗುಲಿಯ ಒಂದು ಮಗ್ಗುಲಲ್ಲಿ ಹಾಕಿದ್ದ ಸಾಲು ಕುರ್ಚಿಗಳ ಪೈಕಿ ಒಂದರಲ್ಲಿ ಕೂತ ಪಿಡಿಓಗೆ ವಿಷಯ ಗಂಭೀರವಾಗಿದೆ ಅನ್ನಿಸಿತು. ಭಾನುವಾರದ ರಜಾ ದಿನವೂ ಹೇಳಿ ಕಳಿಸುವಂತದ್ದೇನಾಗಿರಬಹುದು? ನಾನು ಸರ್ಕಾರದ ನೌಕರನೊ ಅಥವಾ ಈ ಚೇರ್ಮನ್ನರ ಮನೆಯ ಸಂಬಳದಾಳೊ? ಏನಂತ ತಿಳಕಂಡಿದ್ದಾರೆ ಇವರು ನನ್ನನ್ನ? ಈ ಊರು, ಈ ಕೆಲಸ ಸಾಕಾಗಿ ಹೋಗಿದೆ ಅಂತ ಮನಸ್ಸಿನಲ್ಲೇ ಅಂದುಕೊಳ್ಳುತ್ತ ಚೇರ್ಮನ್ನರ ಮುಖ ನೋಡಿದ. ಅವರು ನಿಜವಾಗಿಯೂ ಚಿಂತೆಯಲ್ಲಿದ್ದಂತೆ ಕಂಡರು.

ಹತ್ತು ನಿಮಿಷ ಕಳೆಯುವಷ್ಟರಲ್ಲಿ ರಾಜಣ್ಣ ಬಂದ. 'ತಿಮ್ಮರಾಯಿ ಬಂದಾಗ ಮಲಗಿದ್ದೆ. ನಿನ್ನೆ ದುರ್ಗಕ್ಕೆ ಹೋಗಿದ್ದೆ. ಬರೋದು ತಡ ಆಯ್ತು. ಯಾರೋ ಪುಣ್ಯಾತ್ಮ ಅಮರಾಪುರಕ್ಕೆ ಹೊರಟಿದ್ದವನು ಅವನ ಬೈಕ್‌ನಲ್ಲೇ ಕೂರಿಸಿಕೊಂಡು ಮನೆತನಕ ಬಂದು ಬಿಟ್ಹೋದ... ಬಂದಾಗ ಹನ್ನೆರಡು ಗಂಟೆ ಆಗಿತ್ತು' ಅನ್ನುತ್ತ ಹೇಳಿಕಳಿಸಿದ್ದೇಕೆ ಎಂದು ಬಾಯಿಬಿಟ್ಟು ಕೇಳದೆ ಅದೇ ಮುಖಭಾವದಲ್ಲಿ ಚೇರ್ಮನ್ನರ ಕಡೆ ನೋಡಿದ.

'ದೊಡ್ಡ ಅನಾವುತ ಆಗೈತೆ ರಾಜಣ್ಣ. ನಮ್ಮ ಕೆರೆಯಲ್ಲಿ ಯಾರೋ ತಾಯಿ ಮಗೀನ ಹೆಣಗಳು ತೇಲ್ತಿವೆಯಂತೆ! ಈಗಷ್ಟೇ ಗೊತ್ತಾಯ್ತು. ಮೀಸೆ ರಾಮಣ್ಣನ ಆಳು ಯಂಕಟಪ್ಪ ಗುಡ್ಡದಳ್ಳಿಗೆ ಹೋಗ್ತಿದ್ದಾಗ ನೋಡಿದನಂತೆ. ಅವನೇ ನಮ್ ತಿಮ್ಮರಾಯಿಗೆ ಹೇಳಿದ್ನಂತೆ. ಅವನನ್ನೂ ಕರೆಸಿ ಕೇಳಿದೆ. ಈಗೇನು ಮಾಡೋದು ಗೊತ್ತಾಗ್ತ ಇಲ್ಲ. ಈ ಕೊರೊನಾ ಕಾಲದಲ್ಲಿ ಏನ್ ಮಾಡೋದು, ನಂಗೇನೂ ತೋಚ್ತಾ ಇಲ್ಲ. ನಿಮ್ಮಿಬ್ಬರನ್ನು ಕೇಳಣ ಅಂತ ಕರೆಸಿದೆ.' ಅಂದರು.

ರಾಜಣ್ಣ ಮತ್ತು ಪಿಡಿಓ ಇಬ್ಬರೂ ಸುದ್ದಿ ಕೇಳಿ ಗಾಬರಿಯಾದರು. ಎಂಥಾ ಕೆಲಸ ಆಗೋಯ್ತಲ್ಲ ಅಂತಷ್ಟೇ ಹೇಳಿ ರಾಜಣ್ಣ ಸುಮ್ಮನಾದ. ಕೆಲವು ಕ್ಷಣ ಅವರ ನಡುವೆ ಮೌನ ನೆಲೆಸಿತು. 'ಹೆಣಗಳಿಗೆ ಕೊರೊನಾ ಇದ್ದರೆ ಕೆರೆ ನೀರು ಕುಡಿಯೋಕಾಗಲ್ಲ. ಮಳೆಗಾಲ ಮುಗೀತಾ ಬಂದಿದೆ. ನೀರನ್ನ ಹೊರಕ್ಕೆ ಬಿಡಕೂ ಆಗಲ್ಲ. ಬಿಟ್ಟರೆ ಮುಂದಿನ ಬೇಸಿಗೆ ಮುಗಿಯೋತಂಕ ಎರಡು ಹಳ್ಳಿಗಳ ಜನಕ್ಕೆ ಎಲ್ಲಿಂದ ನೀರು ತಂದು ಒದಗಿಸೋದು? ಏನು ಮಾಡಬೇಕು, ನಂಗಂತೂ ಗೊತ್ತಾಗ್ತ ಇಲ್ಲ. ಏನು ಮಾಡನ ಹೇಳ್ರಿ' ಎನ್ನುತ್ತ ರಾಜಣ್ಣ ಮತ್ತು ಅಮರನಾರಾಯಣನ ಮುಖ ನೋಡಿದರು. ಆ ಕ್ಷಣಕ್ಕೆ ಏನು